ತಮ್ಮ ಕಳಕಳಿಯನ್ನು ನಾನು ಸಂಬಂಧಪಟ್ಟ ಮಂತ್ರಿಗಳ ಗಮನಕ್ಕೆ ತಂದು ಸೂಕ್ತವಾದ ಏರ್ಪಾಡು ಮಾಡಿಸುತ್ತೇನೆ.

ಶ್ರೀ ಎಸ್.ಎಸ್. ಖಾದ್ರಿ :- ಅಧ್ಯಕ್ಷರೇ, ಸಚಿವರು ಹೇಳಿದರು ಮೂಲಭೂತ ಸೌಕರ್ಯಗಳನ್ನು ಒದಗಿಸಿಕೊಡುವ ಕೆಲಸ ನಾನು ಮಾಡಬೇಕು ಅಂತ. ಈಗಾಗಲೇ ಎಪಿಎಂಸಿ ಜೊತೆ ಚರ್ಚೆ ಮಾಡಿದ್ದೇವೆ ಅವರು ಜಾಗವನ್ನು ಕೊಡಲು ತಯಾರಿದ್ದಾರೆ. ಆದರೆ ನನ್ನ ಪ್ರಶ್ನೆ ಇವತ್ತು ಶಿಗ್ಗಾವ್‌ನಲ್ಲಿ ಅಗ್ನಿಶಾಮಕ ದಳವನ್ನು ಪ್ರಾರಂಭ ಮಾಡುವುದಕ್ಕೆ ಮೂಲಭೂತ ಸೌಲಭ್ಯಗಳು ಅಗತ್ಯ ಇದೆ ಎಂದು ಹೇಳಿದಿರಿ. ಆದರೆ ನಮಗೆ ಶಿಗ್ಗಾವ್ ಸವಣೂರು ಎರಡೂ ತಾಲ್ಲೂಕುಗಳು ಬರುವುದರಿಂದ ಸುಮಾರು 50-60 ಕಿಲೋ ಮೀಟರ್ ಅಗ್ನಿಶಾಮಕ ದಳ ದೂರ ಇರುವುದರಿಂದ ಈಗ ತಾತ್ಕಾಲಿಕವಾಗಿ ನಾವು ಸವಣೂರಿನಲ್ಲಿ ಎಲ್ಲಾ ಕಟ್ಟಡಗಳನ್ನು ಒದಗಿಸಿಕೊಡುತ್ತೇವೆ. ಶಿಗ್ಗಾವ್‌ನಲ್ಲೂ ಮಾಡಿದರೂ ಅಷ್ಟೆ. ಸವಣೂರಿನಲ್ಲೂ ಮಾಡಿದರೂ ಅಷ್ಟೆ. ಆದರೆ ಆ ಭಾಗದ ರೈತರಿಗೆ, ಆ ಭಾಗದ ಎಪಿಎಂಸಿ ಮಾರುಕಟ್ಟೆ ವರ್ತಕರಿಗೆ ಅನುಕೂಲ ಮಾಡಿಕೊಡುವ ವ್ಯವಸ್ಥೆಯಲ್ಲಿ ತಾತ್ಕಾಲಿಕವಾಗಿ ತಾವು ಸವಣೂರಿನಲ್ಲಿ ಪ್ರಾರಂಭ ಮಾಡಿ. ನಾವು ಎಪಿಎಂಸಿಯಿಂದ ನಿವೇಶನವನ್ನು ಕೊಟ್ಟ ನಂತರ ತಾವು ಸಂಪೂರ್ಣ ಶಿಗ್ಗಾವ್‌ನಲ್ಲಿ ಪ್ರಾರಂಭ ಮಾಡಿದರೆ ಅನುಕೂಲವಾಗುತ್ತದೆಂದು ನಾನು ತಮ್ಮ ಮುಖಾಂತರ ಸಚಿವರಲ್ಲಿ ಕೇಳುತ್ತೇನೆ. ಇದು ನನ್ನ ಕಳಕಳಿಯ ಮನವಿ. ಇವತ್ತು ಆ ಭಾಗದ ರೈತರ ಬಗ್ಗೆ ನಾವು ಚಿಂತನೆ ಮಾಡುತ್ತಿದ್ದೇವೆ, ಇವತ್ತು ಸರ್ಕಾರದವರು ಚಿಂತನೆ ಮಾಡುತ್ತಿದ್ದಾರೆ. ಹಲವಾರು ದೂರ ದೂರ ಗ್ರಾಮದಿಂದ ಮೇವನ್ನು ಸಂಗ್ರಹಣ ಮಾಡಿ ಇವತ್ತು ತಮ್ಮ ಜಾನುವಾರುಗಳಿಗೆ ಜೋಪಾನ ಮಾಡುವ ಸಂದರ್ಭ ಬಂದಿರುವಾಗ ಇವತ್ತು ಆಕಸ್ಮಿಕ ಬೆಂಕಿಯಿಂದ ಸುಮಾರು ಹಳ್ಳಿಗಳಲ್ಲಿ ಬಣವೆ ಸುಟ್ಟುಹೋಗಿವೆ. ಇವತ್ತು ಅಗ್ನಿಶಾಮಕ ದಳವನ್ನು ಸವಣೂರಿನಲ್ಲಿ ಪ್ರಾರಂಭ ಮಾಡಿಕೊಡಬೇಕೆಂದು ಕೇಳುತ್ತೇನೆ.

ಶ್ರೀ ಡಿ.ಬಿ. ಚಂದ್ರೇಗೌಡ :- ಮಾನ್ಯ ಅಧ್ಯಕ್ಷರೇ, ಈಗಾಗಲೇ ಮಂಜೂರಾಗಿರುವಂಥವು 31 ಕೇಂದ್ರಗಳಿದ್ದಾವೆ. ಇವುಗಳನ್ನು ಮುಗಿಸದೆ ಹೊಸ ಕೇಂದ್ರಗಳನ್ನು ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಇದನ್ನು ಮುಗಿಸುವುದಕ್ಕೆ ಇರುವ ತೊಂದರೆಯನ್ನು ಹೇಳಿದ್ದೇನೆ. ಇವರು ಶಿಗ್ಗಾಂವ್ ಕೊಟ್ಟಿರುವುದು ಸವಣೂರಿಗೆ ಬದಲಾಯಿಸಿ ಎಂದು ಶಾಸಕರು ಪತ್ರವನ್ನು ಬರೆದರೆ ಅದನ್ನು ಸಂಬಂಧಪಟ್ಟವರಿಗೆ ತಿಳಿಸುತ್ತೇನೆ.

ಗದಗ್ ಜಿಲ್ಲೆಯಲ್ಲಿ ಕೆರೆಗಳಲ್ಲಿನ ಹೂಳು ತೆಗೆಯುವ ಕೆಲಸಗಳು

108(767) ಶ್ರೀ ಡಿ.ಆರ್. ಪಾಟೀಲ್ (ಗದಗ್) ಮಾನ್ಯ ಗೃಹ ಮತ್ತು ಸಣ್ಣ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಸರ್ಕಾರದ ವಿವಿಧ ಕಾರ್ಯಕ್ರಮಗಳಡಿಯಲ್ಲಿ ಕೆರೆ ಹೂಳು ತೆಗೆಯುವ ಕೆಲಸವನ್ನು ಕಳೆದ ಮೂರು ವರ್ಷಗಳಲ್ಲಿ ಎಷ್ಟು ಸ್ಥಳಗಳಲ್ಲಿ ಅನುಷ್ಠಾನಗೊಳಿಸಲಾಗಿದೆ; (ಜಿಲ್ಲಾವಾರು ಮಾಹಿತಿ ಹಾಗೂ ವೆಚ್ಚದ ವಿವರ ನೀಡಿರಿ)

ಆ) ಗದಗ್ ಜಿಲ್ಲೆಯಲ್ಲಿ ಕೆರೆಗಳಲ್ಲಿ ಹೂಳು ತೆಗೆದ ಕೆರೆಗಳ ಸಂಖ್ಯೆ ಎಷ್ಟು? (ತಾಲ್ಲೂಕುವಾರು ಹಾಗೂ ಗ್ರಾಮಾವಾರು ಮಾಹಿತಿ ನೀಡಿರಿ)

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಮತ್ತು ಸಣ್ಣ ಸಚಿವರು)

ಅ) ಸಣ್ಣ ನೀರಾವರಿ ಇಲಾಖೆಯಿಂದ ವಿವಿಧ ಕಾರ್ಯಕ್ರಮಗಳಡಿ ಕಳೆದ ಮೂರು ವರ್ಷಗಳಲ್ಲಿ ಕೈಗೊಂಡ ಹೂಳು ತೆಗೆಯುವ ಕಾಮಗಾರಿಗಳ ಸಂಖ್ಯೆ ಈ ಕೆಳಕಂಡಂತಿವೆ :

ವರ್ಷ	ಕಾಮಗಾರಿಗಳ ಸಂಖ್ಯೆ
1999-2000	58
2000-2001	25
2001-2001	13
ಒಟ್ಟು	96

ಜಿಲ್ಲಾವಾರು ಮಾಹಿತಿ ಹಾಗೂ ವೆಚ್ಚದ ವಿವರ ಅನುಬಂಧದಲ್ಲಿ ನೀಡಲಾಗಿದೆ.

ಆ) ಮುಂಡರಗಿ ತಾಲ್ಲೂಕಿನ ಜಂತ್ಲಿ ಗ್ರಾಮದ ಶಿರೂರು ಕೆರೆ. ಡಂಬಳ ಗ್ರಾಮದ ಡಂಬಳ ಕೆರೆ, ಪೇಟಾಲೂರು ಗ್ರಾಮದ ಪೇಟಾಲೂರು ಕೆರೆಗಳಲ್ಲಿ ಹೂಳು ತೆಗೆಯಲಾಗಿದೆ.

ಪ್ರಶ್ನೆ ಸಂಖ್ಯೆ: 767ಕ್ಕೆ ಅನುಬಂಧ

ಕಳೆದ ಮೂರು ವರ್ಷಗಳ ಸಾಲಿನಿಂದ ವಿವಿಧ ಕಾರ್ಯಕ್ರಮಗಳಡಿಯಲ್ಲಿ ಸಣ್ಣ ನೀರಾವರಿ ಇಲಾಖೆಯಿಂದ ಕೆರೆಗಳ ಹೂಳು ತೆಗೆದ ಕಾಮಗಾರಿಗಳ ಜಿಲ್ಲಾವಾರು ವಿವರ ಈ ಕೆಳಕಂಡಂತಿದೆ.

(ವೆಚ್ಚ ಲಕ್ಷ ರೂಗಳಲ್ಲಿ)

ಕ್ರಮ ಸಂಖ್ಯೆ	ಜಿಲ್ಲೆ	ಕಾಮಗಾರಿಗಳ ಸಂಖ್ಯೆ	ವೆಚ್ಚ	2000-01 ಕಾಮಗಾರಿಗಳ ಸಂಖ್ಯೆ	ವೆಚ್ಚ	2001-02 ಕಾಮಗಾರಿಗಳ ಸಂಖ್ಯೆ	ವೆಚ್ಚ
1.	ಧಾರವಾಡ	6	63.41	4	9.85	3	2.99
2.	ಗದಗ್	4	32.73	1	3.85	-	-
3.	ಹಾವೇರಿ	2	8.16	-	-	-	-
4.	ಬೆಳಗಾಂ	3	2.31	-	-	-	-
5.	ಉತ್ತರ ಕನ್ನಡ	5	22.39	-	-	-	-
6.	ಬಿಜಾಪುರ	1	12.82	-	-	-	0.02
7.	ಬೆಂಗಳೂರು ದಕ್ಷಿಣ	-	-	2	-	-	14.07
8.	ಬೆಂಗಳೂರು (ಉತ್ತರ)	3	11.77	3	17.90	2	
9.	ಕೋಲಾರ	13	09.41	2	81.11	-	5.84
10.	ತುಮಕೂರು	-	18.11	3	9.92	0	-
11.	ಚಿತ್ರದುರ್ಗ	4	9.08	-	8.29	-	2.16
12.	ದಾವಣಗೆರೆ	4	3.11	-	10.59	-	7.38
13.	ಶಿವಮೊಗ್ಗ	7	0.50	-	27.06	-	9.24
14.	ಮೈಸೂರು	3	50.11	-	0.13	-	5.95
15.	ಚಾಮರಾಜನಗರ	2	28.43	4	15.44	-	0.03
16.	ಮಂಡ್ಯ	1	34.88	2	2.18	-	4.85

ಕ್ರಮ ಸಂಖ್ಯೆ	ಜಿಲ್ಲೆ	ಕಾಮಗಾರಿಗಳ ಸಂಖ್ಯೆ	ವೆಚ್ಚ	2000-01 ಕಾಮಗಾರಿಗಳ ಸಂಖ್ಯೆ	ವೆಚ್ಚ	2001-02 ಕಾಮಗಾರಿಗಳ ಸಂಖ್ಯೆ	ವೆಚ್ಚ
17.	ಹಾಸನ	-	-	-	-	1	-
18.	ಚಿಕ್ಕಮಗಳೂರು	-	-	2	7.73	1	2.92
19.	ದಕ್ಷಿಣ ಕನ್ನಡ	-	29.15	-	3.47	-	0.92
20.	ಉಡುಪಿ	-	6.02	2	16.05	2	11.88
21.	ಕೊಡಗು	-	69.40	-	15.96	4	10.36
	ಒಟ್ಟು	58	412.29	25	229.53	13	79.06

ಶ್ರೀ ಡಿ.ಆರ್. ಪಾಟೀಲ್ :- ಮಾನ್ಯ ಅಧ್ಯಕ್ಷರೇ, ಗದಗ್ ಜಿಲ್ಲೆಯ ಡಂಬಳಕೆರೆ ಹೂಳು ತೆಗೆಯಲಿಕ್ಕೆ ಇಲ್ಲಿಯವರೆಗೆ ಎಷ್ಟು ಹಣವನ್ನು ಖರ್ಚು ಮಾಡಿದ್ದಾರೆ ಮತ್ತು ಮುಂದಿನ ಮಳೆಗಾಲದವರೆಗೆ ಇದರ ಪೂರ್ತಿ ಹೂಳನ್ನು ತೆಗೆಯುವುದಕ್ಕೆ ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಡಿ.ಬಿ. ಚಂದ್ರೇಗೌಡ :- ಮಾನ್ಯ ಅಧ್ಯಕ್ಷರೇ, ನಾನು ಈಗಾಗಲೇ ಮೊದಲನೇ ಒಂದು ಪ್ರಶ್ನೆಗೆ ಉತ್ತರವನ್ನು ಹೇಳುತ್ತಾ ಕೆಲವು ಹೂಳು ತೆಗೆಯುವ ಕಾರ್ಯಕ್ರಮದ ಬಗ್ಗೆ ಅವರಿಗೆ ತಿಳಿಸಿದ್ದೇನೆ. ಗದಗ್ ಜಿಲ್ಲೆಯಲ್ಲಿ ನಾಲ್ಕು ಕೆರೆಗಳನ್ನು ಹೂಳು ತೆಗೆಯುವುದಕ್ಕೆ ಎತ್ತಿ ಕೊಂಡಿದ್ದೇವೆ. ಅದರ ಮಾಹಿತಿಯನ್ನು ನಾನು ಅವರಿಗೆ ಕೊಟ್ಟಿದ್ದೇನೆ. ಇನ್ನೊಂದು ಸಾರಿ ಮಾಹಿತಿಯನ್ನು ಕೊಡುವುದಕ್ಕೆ ನಾನು ಇಚ್ಛಿಪಡುತ್ತೇನೆ.

ಶ್ರೀ ಎಸ್.ಎಸ್. ಪಾಟೀಲ್ :- ತಮಗೆ ಉತ್ತರ ಕೊಡಲು ಸರಿ ಆಗದಿದ್ದರೆ ಸಂಬಂಧಪಟ್ಟ ಮಂತ್ರಿಗಳು ಬಂದು ಹೇಳುತ್ತಾರೆ.

ಶ್ರೀ ಡಿ.ಬಿ. ಚಂದ್ರೇಗೌಡ :- ಸರಿಯಾಗಿ ಎಂದರೆ ಹೇಗೆ? ಯಾರು ಬಂದರೂ ಇದೇ ಉತ್ತರವೇ?

ಶ್ರೀ ಎಸ್.ಎಸ್. ಪಾಟೀಲ್ :- ಇದೆಲ್ಲಾ ನನ್ನ ತಾಲ್ಲೂಕಿಗೆ ಸಂಬಂಧಪಟ್ಟವುಗಳು. ಆ ಮಂತ್ರಿಗಳು ಇದ್ದಾಗ ಉತ್ತರ ಕೊಟ್ಟರೆ ಸರಿಯಾಗುತ್ತದೆ.

ಶ್ರೀ ಡಿ.ಬಿ. ಚಂದ್ರೇಗೌಡ :- ಮಾನ್ಯ ಅಧ್ಯಕ್ಷರೇ, ಡಂಬಳ ಕೆರೆಗೆ 5 ಲಕ್ಷದ 48 ಸಾವಿರ ರೂಪಾಯಿಗಳನ್ನು ಈ ಕೆರೆಗೆ ಖರ್ಚು ಮಾಡಿದ್ದೇವೆ. ಶಿರೂರು ಕೆರೆಗೆ 12 ಲಕ್ಷದ 63 ಸಾವಿರ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಇನ್ನೊಂದು ಪೇಟಾಲೂರು ಕೆರೆಗೆ 15 ಲಕ್ಷದ 73 ಸಾವಿರ ರೂ. ಖರ್ಚಾಗಿದೆ. ನಾಗರ್ಸಿಕೊಪ್ಪಕ್ಕೆ 2 ಲಕ್ಷದ 74 ಸಾವಿರ ರೂ. ಖರ್ಚಾಗಿದೆ.

ಶ್ರೀ ಡಿ.ಆರ್. ಪಾಟೀಲ್ :- ಮಾನ್ಯ ಅಧ್ಯಕ್ಷರೇ, ಮುಂದಿನ ಮಳೆಗಾಲ ಶುರುವಾಗುವುದರಲ್ಲಿ ಡಂಬಳ ಕೆರೆಯ ಹೂಳನ್ನು ತೆಗೆಯುವುದನ್ನು ಪೂರ್ತಿ ಮುಗಿಸುತ್ತೀರಾ?

ಶ್ರೀ ಡಿ.ಬಿ. ಚಂದ್ರೇಗೌಡ :- ಮಾನ್ಯ ಅಧ್ಯಕ್ಷರೇ, ಡಂಬಳ ಕೆರೆಗೆ ಕೊಟ್ಟಂಥ ಹಣ ಪೂರ್ತಿ ಖರ್ಚಾಗಿದೆ. ಇನ್ನೂ ಅವಶ್ಯಕತೆ ಬಿದ್ದರೆ ಒದಗಿಸುವುದಕ್ಕೆ ಸಿದ್ಧರಿದ್ದೇವೆ.

ಶ್ರೀ ಕರಡಿ ಸಂಗಣ್ಣ ಅಮರಪ್ಪ :- ಮಾನ್ಯ ಅಧ್ಯಕ್ಷರೇ, ಪ್ರಶ್ನೆ ಡಿ.ಆರ್. ಪಾಟೀಲರು ಕೇಳಿದ್ದ ಬಹಳ ಸೂಕ್ತ ಇದೆ. ಮಾನ್ಯ ಮಂತ್ರಿಗಳು ಸರಿಯಾದ ಉತ್ತರವನ್ನು

ಕೊಡುವುದಕ್ಕಾಗುತ್ತಿಲ್ಲವೆಂಬುದು ನನ್ನ ಭಾವನೆ ಏಕೆಂದರೆ ಇವರು ಒಟ್ಟು ಮೂರು ವರ್ಷದಲ್ಲಿ 96 ಕೆರೆಗಳನ್ನು ಕೈಗೆತ್ತಿಕೊಂಡಿದ್ದಾರೆ. ಆದರೆ ಖರ್ಚು ಮಾಡಿದ ಹಣ ಎಷ್ಟೆಂದರೆ 7 ಕೋಟಿ 15 ಲಕ್ಷ ರೂ. ಇವರು ಒಂದು ಕಡೆ ರೈತ ಕಾಯಕೆರೆಗೆ ಎಂದು ಒಂದು ಕಡೆ ತೆಗೆದುಕೊಂಡಿದ್ದಾರೆ. ಜಲಸಂವರ್ಧನೆ ಯೋಜನೆ ಎಂದು ಕಡೆಗೆ ತೆಗೆದುಕೊಂಡಿದ್ದಾರೆ. ಬಹಳಷ್ಟು ಪ್ರಚಾರ ಈ ಯೋಜನೆ ಬಹಳ ಅತ್ಯವಶ್ಯಕವಾದ ಯೋಜನೆ, ಬಹಳ ಭವಿಷ್ಯವನ್ನು ಕೊಡುವ ಯೋಜನೆ ಇದು. ಆದರೆ ಇವರು ಹಣ ಖರ್ಚು ಮಾಡುವುದು ನೋಡಿದರೆ ಎಲ್ಲಿಯೂ ನಾವು ನೀರು ಸಂಗ್ರಹಣೆ ಮಾಡುವುದಕ್ಕೆ ಸಾಧ್ಯವಾಗುತ್ತಿಲ್ಲ. ಕೆಲವು ಜಿಲ್ಲೆಗಳಲ್ಲಂತೂ ಯಾವುದೇ ಯೋಜನೆಗಳನ್ನು ಇವರು ಕೈಗೆತ್ತಿಕೊಂಡಿಲ್ಲ. ಇದರ ಅರ್ಥವೇನೆಂದರೆ ನಾವು ಭವಿಷ್ಯ ಕೊಡುತ್ತೇವೆ, ರೈತರನ್ನು ಅಭಿವೃದ್ಧಿಗೊಳಿಸುತ್ತೇವೆ, ಮುಂದೆ ಅವರ ಕೃಷಿ ಸಂಪತ್ತನ್ನು ಹೆಚ್ಚಿಸುತ್ತೇವೆ ಎಂದು ಹೇಳುತ್ತಾರೆ, ಆದರೆ ಕೆರೆ ನಿರ್ಮಾಣ ಮಾಡತಕ್ಕದ್ದು ಇವತ್ತು ಬರೀ ಘೋಷಣೆಗಳು ಮಾತ್ರವಾಗುತ್ತಿವೆ. ಪಬ್ಲಿಸಿಟಿಗೆ ನೀವು ಖರ್ಚು ಮಾಡುತ್ತಿದ್ದೀರಿ. ಇದಕ್ಕೆ ಹಣವನ್ನು ನೀವು ಕೊಟ್ಟೇ ಇಲ್ಲ. ಅದಕ್ಕೆ ತಾವೇನು ಮಂತ್ರಿಗಳು ಉತ್ತರ ಹೇಳುತ್ತೀರೋ ಹೇಳಿ.

ಶ್ರೀ ಡಿ.ಬಿ. ಚಂದ್ರೇಗೌಡ :- ಮಾನ್ಯ ಅಧ್ಯಕ್ಷರೇ, ಉತ್ತರ ಹೇಳುವುದಕ್ಕೆ ನಿಂತಿದ್ದೇನೆ. ನಿಮ್ಮ ಪ್ರಶ್ನೆಗೆ ಉತ್ತರ ಪೂರ್ತಿ ಇದರಲ್ಲಿ ಒದಗಿಸಿದ್ದೇವೆ. ಮಾಹಿತಿ ಸಮೇತ. ನೀವು ಕೇಳಿದ ಹಾಗೆ ನಾನು ಪ್ರತಿ ವಾರ್ಷಿಕ ಮಾಹಿತಿಯನ್ನೂ ಕೊಟ್ಟಿದ್ದೇನೆ. ಸುಮಾರು 96 ಕೆರೆಗಳಲ್ಲಿ ಹೂಳು ತೆಗೆಯುವ ಕಾರ್ಯಕ್ರಮಗಳನ್ನು ಹಾಕಿಕೊಂಡೆವು. ಆದಾದಮೇಲೆ ಪ್ರತಿ ಹೋಬಳಿಗೊಂದು ಕೆರೆಗೆಂದು 745 ಕೆರೆಗಳನ್ನು 195 ಕೋಟಿ ರೂ. ವೆಚ್ಚದಲ್ಲಿ ಹೂಳು ತೆಗೆಯುವ ಕಾರ್ಯಕ್ರಮ ಸೇರಿದಂತೆ ಸಮಗ್ರವಾದ ರೀತಿ ತೆಗೆದುಕೊಂಡಿದ್ದೇವೆ.

ಶ್ರೀ ಕರಡಿ ಸಂಗಣ್ಣ ಅಮರಪ್ಪ :- ಮಾನ್ಯ ಅಧ್ಯಕ್ಷರೇ, 195 ಕೋಟಿ ರೂಪಾಯಿಗಳ ಯೋಜನೆಯಲ್ಲಿ ಬರೀ ಏಳು ಕೋಟಿ ರೂಪಾಯಿಗಳನ್ನು ಮಾತ್ರ ಇವರು ಖರ್ಚು ಮಾಡಿದ್ದಾರೆ.

ಶ್ರೀ ಡಿ.ಬಿ. ಚಂದ್ರೇಗೌಡ :- ಮಾನ್ಯ ಅಧ್ಯಕ್ಷರೇ, ನೀವು ಪೂರ್ತಿ ಯೋಜನೆಗಳನ್ನು ಅರ್ಥ ಮಾಡಿಕೊಳ್ಳಬೇಕು. ಮೊದಲನೇ ಯೋಜನೆ ನಾನು ಹೇಳಿದೆ. ರೈತ ಸಹಭಾಗಿತ್ವದ ಕೆರೆಗಳ ಯೋಜನೆ ಬೇರೆ. ಜಲಸಂವರ್ಧನೆ ಯೋಜನೆಯಿಂದ ತೆಗೆಯುವ ಯೋಜನೆ ಬೇರೆ. ಅದಕ್ಕೆ ನಾವು ವಿಶ್ವಬ್ಯಾಂಕ್‌ನಿಂದ ಎರಡು ಸಾವಿರ ಕೋಟಿ ರೂಪಾಯಿಗಳ ಸಾಲವನ್ನು ತೆಗೆದುಕೊಂಡಿದ್ದೇವೆ. ಇದು 2000-01, 2001-02, ಮೂರು ವರ್ಷಗಳಲ್ಲಿ ಆಗಿರುವ ಖರ್ಚಿನ ವಿವರವನ್ನು ಕೊಟ್ಟಿದ್ದೇನೆ. ಮುಂದೆ ಬರತಕ್ಕ ಜಲಸಂವರ್ಧನಾ ಕೆರೆಯ ಬಗ್ಗೆ ಅದು ಇನ್ನೂ ಪ್ರಾರಂಭವಾಗಬೇಕಾಗಿದೆ. ಪ್ರಾರಂಭವಾದಾಗ ಬರುತ್ತದೆ.

ಶ್ರೀ ಸಿ. ಗುರುಸ್ವಾಮಿ :- ಮಾನ್ಯ ಅಧ್ಯಕ್ಷರೇ, ವಿವರವನ್ನೇನೊ ಕೊಟ್ಟಿದ್ದಾರೆ. ಮೂರು ವರ್ಷಗಳಿಂದ ಕೆಲವು ಜಿಲ್ಲೆಗಳಲ್ಲಿ ಆಯ್ಕೆಯಾದ ಜಿಲ್ಲೆಗಳಲ್ಲಿ ಕಾಮಗಾರಿಗಳನ್ನು ತೆಗೆದುಕೊಂಡಿದ್ದಾರೆ. ಬಹಳ ಸಂತೋಷ ಇರಲಿ. ನಾನು ಕೇಳುವುದು ಈ ವಿವರಣೆಯನ್ನು ನೋಡಿದಾಗ ಇಲ್ಲಿ ತಾರತಮ್ಯವಾದಂತೆ ಕಾಣಿಸುತ್ತದೆ. ಕೋಲಾರ ಜಿಲ್ಲೆಗೆ ತಾವೇನಾದರೂ ಪ್ರಭಾವವೇನಾದರೂ ಬೀರಿದ್ದೀರೋ ಏನೊ ಗೊತ್ತಿಲ್ಲ. 15 ಕೆರೆಗಳನ್ನು ತೆಗೆದುಕೊಂಡಿದ್ದಾರೆ. ನಮ್ಮ ಚಾಮರಾಜನಗರ ಮತ್ತು ಬೇರೆ ಜಿಲ್ಲೆಗಳನ್ನು ನೋಡಿದರೆ ಬಹಳ ವ್ಯತ್ಯಾಸ ಇದೆ. ಯಾವ ಮಾನದಂಡಗಳನ್ನು ಇಟ್ಟುಕೊಂಡು ಕೆರೆ ಆಯ್ಕೆ ಮಾಡಿದರೋ ಗೊತ್ತಿಲ್ಲ. ಈ

ತಾರತಮ್ಯವಾಗಬಾರದೆಂದು ನಾನು ಮಾನ್ಯ ಮಂತ್ರಿಗಳಲ್ಲಿ ಕೇಳುತ್ತಿದ್ದೇನೆ. ಇದರ ಬಗ್ಗೆ ವಿವರಣೆಯನ್ನು ಕೊಡಬೇಕು. ನಮಗೆ ಮಾತ್ರ ಎರಡು-ಮೂರು.

ಅಧ್ಯಕ್ಷರು :- ಮಾನ್ಯ ಕೃಷ್ಣಮೂರ್ತಿಯವರೇ, ತಮ್ಮನ್ನು ಕರೆಯಲಿಲ್ಲ. ದಯವಿಟ್ಟು ಕುಳಿತುಕೊಳ್ಳಿ. ಕೋಲಾರ ಜಿಲ್ಲೆಯಲ್ಲಿ ಜೀವನದಿಗಳು ಯಾವುದೂ ಇಲ್ಲ. ಕೆರೆಗಳ ಅವಶ್ಯಕತೆ ಇದೆ. ಕೆರೆಗಳಲ್ಲಿ ಹೂಳು ಎತ್ತುವುದೇ ತಪ್ಪು ಎಂದರೆ ಇದರ ಅರ್ಥವೇನು?

ಶ್ರೀ ಸಿ. ಗುರುಸ್ವಾಮಿ :- ಚಾಮರಾಜನಗರ ಜಿಲ್ಲೆಯಲ್ಲೂ ಇಲ್ಲವೇ ಇಲ್ಲ.

ಅಧ್ಯಕ್ಷರು :- ಅಲ್ಲಿ 4400 ಕೆರೆಗಳು ಇವೆ. ಬರೀ ಬರಡು ನೆಲ.

ಶ್ರೀ ಡಿ.ಬಿ. ಚಂದ್ರೇಗೌಡ :- ಮಾನ್ಯ ಸಭಾಧ್ಯಕ್ಷರೇ, ತಾವೇ ಉತ್ತರ ಹೇಳಿದ್ದೀರಿ. ಆದರೆ ಮಾನ್ಯ ಗುರುಸ್ವಾಮಿಯವರ ಗಮನಕ್ಕೆ ನಾನು ಈ ಹಿಂದಿನ ಪ್ರಶ್ನೆಗೆ ಉತ್ತರ ಕೊಡುತ್ತಾ ಹೇಳಿದೆ. ಒಟ್ಟು ನಾವು ಈ ಕೆರೆ ಹೂಳು ಎತ್ತುವ ಕಾರ್ಯಕ್ರಮವನ್ನು ಕೈಗೆ ತೆಗೆದುಕೊಳ್ಳುವಾಗ ಸಾಯಿಲ್ ವೇರಿಯೇಷನ್ಸ್‌ನ್ನು ನೋಡಿಕೊಂಡು ತೆಗೆದುಕೊಳ್ಳುತ್ತೇವೆ. ಶೇಕಡವಾರು ಬಡತನ ರೇಖೆಯಿಂದ ಕೆಳಗಡೆ ಇರತಕ್ಕ ಸಂಖ್ಯೆಯನ್ನು ಗಮನಿಸಿ ತೆಗೆದುಕೊಳ್ಳುತ್ತೇವೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರ ಸಂಖ್ಯೆಯನ್ನು ನೋಡಿ ತೆಗೆದುಕೊಳ್ಳುತ್ತೇವೆ. ಭೂರಹಿತ ಹಾಗೂ ಚಿಕ್ಕ ಹಿಡುವಳಿದಾರರ ಸಂಖ್ಯೆಯನ್ನು ನೋಡಿ ತೆಗೆದುಕೊಳ್ಳುತ್ತೇವೆ. ಮಹಿಳಾ ಸಾಕ್ಷರತೆ, ಕೆರೆಗಳ ಸಾಂದ್ರತೆ, ತಾವು ಹೇಳಿದಹಾಗೆ ಕೆರೆಗಳ ಸಾಂದ್ರತೆ ಬಹಳ ಮುಖ್ಯವಾದ ಪ್ರಶ್ನೆ. ಕೋಲಾರದಿಂದ ಆಂಧ್ರಪ್ರದೇಶದ ಬಾರ್ಡರ್‌ನಲ್ಲಿ ಬರತಕ್ಕ ಎಲ್ಲಾ ಡಿಸ್ಟ್ರಿಕ್ಟ್‌ಗಳು ಈ ಒಂದು ತೊಂದರೆಯನ್ನು ಅನುಭವಿಸುತ್ತಿವೆ. ಆದ್ದರಿಂದ ಆ ಭಾಗಗಳನ್ನು ಆಯ್ಕೆ ಮಾಡಿ ಕೊಂಡಿದ್ದೇವೆ.

ಅಧ್ಯಕ್ಷರು :- ಈ ಪರಿಪಾಠ ನಿಲ್ಲಬೇಕು. ನಾನು ಕರೆದವರೇ ಮಾತ್ರ ಮಾತನಾಡಬೇಕು.

ಶ್ರೀ ಕೆ.ಎಂ. ಕೃಷ್ಣಮೂರ್ತಿ :- ಮಾನ್ಯ ಅಧ್ಯಕ್ಷರೇ, ನಮ್ಮ ಚಿಕ್ಕಮಗಳೂರು ಜಿಲ್ಲೆಯಲ್ಲಿ ಹೆಚ್ಚುಕಡಿಮೆ ಸಣ್ಣಕೆರೆಗಳು ಮಲೆನಾಡು ಭಾಗದಲ್ಲಿ ಸುಮಾರು 85 ಇವೆ. ಬಯಲುಸೀಮೆಯಲ್ಲಿ ಕಡೂರು ತಾಲ್ಲೂಕಿನಲ್ಲಿ ಸುಮಾರು 38 ಕೆರೆಗಳಿವೆ. ತರೀಕೆರೆ ತಾಲ್ಲೂಕಿನಲ್ಲಿ 22 ಕೆರೆಗಳಿವೆ. ಯಾವುದಾದರೂ ನಮ್ಮ ಚಿಲ್ಲಾ ಉಸ್ತುವಾರಿ ಸಚಿವರೇ ಚಂದ್ರೇಗೌಡರು ಉತ್ತರ ಕೊಡುತ್ತಿದ್ದಾರೆ. ಅವರು ಉಸ್ತುವಾರಿ ಸಚಿವರಾಗಿದ್ದು ಯಾವುದಾದರೂ ಚಿಕ್ಕಮಗಳೂರು ಜಿಲ್ಲೆಯಲ್ಲಿ ಜಲಸಂವರ್ಧನೆ ಇರಬಹುದು ಅಥವಾ ಹೂಳು ತೆಗೆಯುವ ಕಾರ್ಯಕ್ರಮವಿರಬಹುದು. ಅದನ್ನೇನಾದರೂ ತೆಗೆಸಿದ್ದಾರೆಯೇ? ಬರೀ ಏಕೆ ಪ್ರಚಾರ ಮಾಡುತ್ತಾರೆ? ಪ್ರತಿ ಹೋಬಳಿಗೆ ಒಂದು ಕೆರೆ ಎಂದು ಹೇಳಿದಮೇಲೆ ಈಗಾಗಲೇ ಎರಡು ವರ್ಷವಾಯಿತು, ಕುಮಾರ್ ಬಂಗಾರಪ್ಪನವರು ಸಣ್ಣ ನೀರಾವರಿ ಸಚಿವರಾಗಿದ್ದಾಗ ದೊಡ್ಡದಾಗಿ ಪೇಪರ್‌ನಲ್ಲಿ ಹಾಕಿಕೊಂಡು ಕೆರೆಗಳ ಹೂಳನ್ನು ನಾವು ಒಂದು-ಒಂದೂವರೆ ವರ್ಷದಲ್ಲಿ ತೆಗೆಸಿಬಿಡುತ್ತೇವೆಂದು ಹೇಳಿ ಇವತ್ತು ಏನಾಗಿದೆ ಎಂದರೆ ಹೂಳನ್ನು ತೆಗೆಯದೇ ಇರುವುದರಿಂದ ಇವತ್ತೇನಾದರೂ ಕುಡಿಯುವ ನೀರಿನ ಸಮಸ್ಯೆಯಾಗಿದ್ದರೆ ಆ ಸಮಸ್ಯೆ ನಿವಾರಣೆ ಮಾಡದೆ ಕುಡಿಯುವ ನೀರಿನ ಸಮಸ್ಯೆಯನ್ನು ಎದುರಿಸುತ್ತಿದ್ದೀರಿ. ಇವತ್ತು ಚಿಕ್ಕಮಗಳೂರು ಜಿಲ್ಲೆ ಅತ್ಯಂತ ಹೆಚ್ಚು ಮಳೆ ಬೀಳುವ ಜಿಲ್ಲೆ. ಇವತ್ತು ಕೆರೆಗಳ ಹೂಳು ತುಂಬಿರುವುದರಿಂದ ಏನಾಗಿದೆ ಎಂದರೆ ನಾವು 400-450 ಅಡಿ ವರೆಗೂ ಬೋರ್‌ವೆಲ್ ಕೊರೆದರೂ ಕೂಡ ನಮಗೆ ನೀರು ಸಿಗುತ್ತಿಲ್ಲ. ಕೆರೆಗಳಲ್ಲಿ ನೀರೇನಾದರೂ ತುಂಬಿದ್ದರೆ ರೀಛಾರ್ಜ್ ಆಗುತ್ತಿತ್ತು.

ಅಧ್ಯಕ್ಷರು :- ನೀವು ದಯವಿಟ್ಟು ಸಪ್ಲಿಮೆಂಟರಿ ಪ್ರಶ್ನೆ ಕೇಳಿ.

ಶ್ರೀ ಕೆ.ಎಂ. ಕೃಷ್ಣಮೂರ್ತಿ :- ಇದೊಂದು ತರಹ ಹುಚ್ಚು ಬಿಡದ ಹೊರತು ಮದುವೆ ಆಗುವುದಿಲ್ಲ. ಮದುವೆ ಆಗದ ಹೊರತು ಹುಚ್ಚು ಬಿಡುವುದಿಲ್ಲ ಎಂಬ ರೀತಿ. ವೈದ್ಯ ಏನು ಹೇಳುತ್ತಾನೆ? ನಿಮ್ಮ ಹುಡುಗನಿಗೆ ಮದುವೆ ಮಾಡಿದರೆ ಹುಚ್ಚು ಬಿಡುತ್ತದೆ ಎಂದು ಹೇಳುತ್ತಾನೆ ಹೆಣ್ಣು ಕೊಡುವವರು ಏನು ಹೇಳುತ್ತಾರೆ ಎಂದರೆ ಹುಚ್ಚು ಬಿಟ್ಟರೆ ನಾವು ಹೆಣ್ಣು ಕೊಡುತ್ತೇವೆ ಎನ್ನುತ್ತಾರೆ. ಯಾವುದಾದರೂ ಒಂದು ಸಮಸ್ಯೆಯನ್ನು ನಿವಾರಣೆ ಮಾಡಿ.

ಶ್ರೀ ಡಿ.ಬಿ. ಚಂದ್ರೇಗೌಡ :- ಮಾನ್ಯ ಸಭಾಧ್ಯಕ್ಷರೆ, ಇಲ್ಲಿ ಕೇಳಿರತಕ್ಕ ಪ್ರಶ್ನೆ ಗದಗ್ ಜಿಲ್ಲೆಯಲ್ಲಿ ಕೆರೆಗಳ ಹೂಳು ತೆಗೆದ ಕೆರೆಗಳ ಸಂಖ್ಯೆ ಎಷ್ಟು ಎಂದು ಮಾನ್ಯ ಕೃಷ್ಣ ಮೂರ್ತಿಯವರ ಸ್ಪೆಸಿಫಿಕ್ ಆಗಿ ಚಿಕ್ಕಮಗಳೂರಿನ ಕೆರೆಗಳ ಬಗ್ಗೆ ಕೇಳಿದರೆ ಅದಕ್ಕೆ ಉತ್ತರ ತರಿಸಿ ಕೊಡುತ್ತೇನೆ.

ಅಧ್ಯಕ್ಷರು :- ನಾನು ಯಾರ ಹೆಸರು ಕರೆಯುತ್ತೇನೆ, ಅವರ ಮಾತು ಬರೆದುಕೊಳ್ಳಿ.

ಶ್ರೀ ಎಸ್.ಎಸ್. ಪಾಟೀಲ್ :- ಸನ್ಮಾನ್ಯ ಅಧ್ಯಕ್ಷರೆ, ಇವರು ಇಲ್ಲಿ ಉತ್ತರ ಕೊಟ್ಟಿರುವುದರಲ್ಲಿ ಮುಂಡರಗಿ ತಾಲ್ಲೂಕಿನ ಜಂತ್ಲಿ ಗ್ರಾಮದಲ್ಲಿ ಡಂಬಳ ಕೆರೆ, ಪೇಟಲೂರು ಕೆರೆ, ಶಿರೂರು ಕೆರೆ, ಈ ಮೂರು ಕೆರೆಗಳೂ ನನ್ನ ತಾಲ್ಲೂಕಿಗೆ ಸಂಬಂಧಪಟ್ಟಿರುವಂತಹದ್ದು, ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟಿರುವಂತಹದು. ತಾವು ಉತ್ತರದಲ್ಲಿ ಏನು ಹೇಳಿದ್ದೀರಿ ಎಂದರೆ ಶಿರೂರಿಗೆ 12 ಲಕ್ಷ ಎಂದು ಹೇಳಿದ್ದೀರಿ ಪೇಟಾಲೂರಿಗೆ 15 ಲಕ್ಷ ಹೇಳಿದ್ದೀರಿ. ಡಂಬಳ ಕೆರೆಗೆ ಎಷ್ಟು ಹಾಕಿದ್ದೀರಿ ಎಂಬುದನ್ನು ದಯವಿಟ್ಟು ಹೇಳಬೇಕು. ತದ ನಂತರ ತಾವು ಇಲ್ಲಿ ಉತ್ತರ ಕೊಡುವಲ್ಲಿ ಹಿಂದೆ ಯಾವ್ಯಾವ ತಾಲ್ಲೂಕಿಗೆ ಎಷ್ಟು ಕೊಟ್ಟಿದ್ದೇವೆಂದು ವಿವರ ನೀಡಿದ್ದೀರಿ. ಅಲ್ಲಿ ಗದಗ್ ಜಿಲ್ಲೆಯಲ್ಲಿ ಕಾಮಗಾರಿಗಳ ಸಂಖ್ಯೆ 4 ಎಂದು ಹೇಳಿದ್ದೀರಿ. ವೆಚ್ಚ 32.73 ಎಂದು ಹೇಳಿದ್ದೀರಿ ಮುಂದೆ 2000-01ನೇ ಸಾಲಿಗೆ ಕಾಮಗಾರಿ 1 ವೆಚ್ಚ 3.85 ಎಂದು ಹೇಳುತ್ತೀರಿ. ಏನು 32.73 ಲಕ್ಷ ಖರೇನೋ ಅಥವಾ 3.85 ಖರೇನೋ? ಇಲ್ಲಿ ಇದೇ ಗೊಂದಲ ಇದೆ. ಇಲ್ಲಿ 32 ಲಕ್ಷ ರೂ. ಟೋಟಲ್ ವೆಚ್ಚ ಎಂದು ಹೇಳುತ್ತೀರಿ. ಖರ್ಚು ಯಾವ್ಯಾವುದು ಎಂದು ಹೇಳುವುದರಲ್ಲಿ 2000-01ಕ್ಕೆ ಏನೂ ವೆಚ್ಚ ಮಾಡಿಲ್ಲ. 2000-01ಕ್ಕೆ 1 ಕೆರೆ ಮಾಡಿದ್ದೀರಿ, ವೆಚ್ಚ 3.85 ಲಕ್ಷ ಎಂದು ಹೇಳುತ್ತಿದ್ದೀರಿ. ಇದನ್ನು ನಾನು ನೋಡಿದ್ದೇನೆ. ನನ್ನದೇ ತಾಲ್ಲೂಕು ಇದ್ದು ನನಗೆ ಗೊತ್ತಿದೆ. ಇದರಲ್ಲಿ ಬಹಳ ಅವ್ಯವಹಾರ ಆಗಿದೆ ಎಂದು ಅನ್ನಿಸುತ್ತದೆ. ಮೂರು ವರ್ಷದಲ್ಲಿ ಇಷ್ಟು ದೊಡ್ಡ ಪ್ರಮಾಣದಲ್ಲಿ ಕೆರೆಗೆ ಖರ್ಚೇ ಬಿದ್ದಿಲ. ಇದು ಹೇಗೆ ಇಲ್ಲಿ ಖರ್ಚು ಬಂತು? ನಿಜವಾಗಿ ತಾವು ಇದರ ವಿವರಣೆ ಕೊಡಬೇಕು. ಯಾವ್ಯಾವ ಕೆರೆಗೆ ಎಷ್ಟು ಖರ್ಚು ಬಿದ್ದಿದೆ? ಯಾವ ವೇಳೆಗೆ ಖರ್ಚು ಬಿದ್ದಿದೆ? ಇಲ್ಲಿ ನೀವು ಹೇಳುವ ಉತ್ತರದಲ್ಲೇ ತಪ್ಪು ಇದೆ. ಮೂರು ಲಕ್ಷ ರೂಪಾಯಿ ಖರ್ಚು ಮಾಡಿದ್ದೇವೆಂದು ಇಲ್ಲಿ ಹೇಳುತ್ತೀರಿ. ಒಂದು ಕಡೆ 32 ಲಕ್ಷ ರೂಪಾಯಿ ಎಂದು ಹೇಳುತ್ತೀರಿ.

ಶ್ರೀ ಡಿ.ಬಿ. ಚಂದ್ರೇಗೌಡ :- 3 ಕೆರೆಗಳ ಉತ್ತರ ಬಂದಿತ್ತು. ನಾಲ್ಕನೆಯದು ನಾಗರಕೊಪ್ಪ ಕರೆಯದು ವಿವರ ಇರಲಿಲ್ಲ. ಅದನ್ನು ತರಿಸಿ ಅದಕ್ಕೆ ಸೇರಿಸಿ ಕೊಡುತ್ತಿದ್ದೇನೆ. ಡಂಬಳ ಕೆರೆಗೆ 5 ಲಕ್ಷದ 68 ಸಾವಿರ ರೂಪಾಯಿ ಖರ್ಚು ಮಾಡಿದ್ದೇವೆ. ಶಿರೂರು ಕೆರೆಗೆ 12 ಲಕ್ಷದ 63 ಸಾವಿರ ರೂಪಾಯಿ ಖರ್ಚು ಮಾಡಿದ್ದೇವೆ. ಪೇಟಾಲೂರಿಗೆ 15 ಲಕ್ಷ 73 ಸಾವಿರ ರೂಪಾಯಿ ಖರ್ಚು ಮಾಡಿದ್ದೇವೆ. ನಾಗರ್ಸಿ ಕೊಪ್ಪಕ್ಕೆ 2.74 ಲಕ್ಷ ರೂ. ಖರ್ಚು ಮಾಡಿದ್ದೇವೆ.

ಶ್ರೀ ಎಸ್.ಎಸ್. ಪಾಟೀಲ್ :- ಯಾವಾಗ ಖರ್ಚು ಮಾಡಿದ್ದಾರೆ ಎಂಬ ಬಗ್ಗೆ ನೀವು ದಿನಾಂಕವನ್ನು ಹೇಳಿ. ಶಿರೂರಿಗೆ 12 ಲಕ್ಷ 63 ಸಾವಿರ ರೂಪಾಯಿ ಯಾವಾಗ ಖರ್ಚು ಹಾಕಿದ್ದೀರಿ, ಪೇಟಾಲೂರಿಗೆ 15 ಲಕ್ಷ 73 ಸಾವಿರ ರೂಪಾಯಿ ಯಾವಾಗ ಖರ್ಚು ಹಾಕಿದ್ದೀರಿ ಡಂಬಳ ಕೆರೆಗೆ 5 ಲಕ್ಷ 68 ಸಾವಿರ ರೂಪಾಯಿ ಯಾವಾಗ ಖರ್ಚುಹಾಕಿದ್ದೀರಿ ಎಂದು ಹೇಳಿ.

ಶ್ರೀ ಡಿ.ಬಿ. ಚಂದ್ರೇಗೌಡ :- ವಿವರಗಳು ನನ್ನ ಹತ್ತಿರ ಇಲ್ಲ, ತರಿಸಿ ಕೊಡುತ್ತೇನೆ.

ಶ್ರೀ ಎಸ್.ಎಸ್. ಪಾಟೀಲ್ :- ದಯವಿಟ್ಟು ತರಿಸಿ ಕೊಡಿ, ಅದರಲ್ಲಿ ಅವ್ಯವಹಾರಗಳು ನಡೆದಿವೆ.

ಅಧ್ಯಕ್ಷರು :- ಮಾನ್ಯ ಪಾಟೀಲ್ ಅವರೇ, ಇನ್ನೂ 8 ಪ್ರಶ್ನೆಗಳು ಇವೆ. 15 ನಿಮಿಷ ಇದೆ, ನಾನು ಹೇಗೆ ಮ್ಯಾನೇಜ್ ಮಾಡಬೇಕು ಹೇಳಿ? ಒಂದೊಂದನ್ನೂ ಯಾವತ್ತೂ ಖರ್ಚು ಮಾಡಿದ್ದೀರಿ ಎಂಬ ಬಗ್ಗೆ ದಿನಾಂಕದ ವಿವರಗಳನ್ನು ಕೊಡಬೇಕು ಎಂದರೆ ಒಂದೊಂದನ್ನೂ ಅವರು ಹೇಗೆ ಹೇಳುವುದಕ್ಕೆ ಆಗುತ್ತದೆ? ಒಂದೊಂದು ಹೇಳುವುದಕ್ಕೆ ಹೋದರೆ ಎಂಟು ಪ್ರಶ್ನೆ ನಮ್ಮ ಮುಂದೆ ಇದೆ. ಇರುವುದು 15 ನಿಮಿಷ ಹೇಗೆ ಮ್ಯಾನೇಜ್ ಮಾಡುವುದು ದಯವಿಟ್ಟು ಹೇಳಿ. ನೀವು ಅರ್ಥಮಾಡಿಕೊಳ್ಳಬೇಕು. ಸುಮ್ಮನೇ ಸೂಕ್ಷ್ಮವಾಗಿ ಪ್ರಶ್ನೆ ಕೇಳಬೇಕು. ಉತ್ತರ ತೆಗೆದುಕೊಳ್ಳಬೇಕು.

ಶ್ರೀ ಡಿ.ಬಿ. ಚಂದ್ರೇಗೌಡ :- ಈಗ ಪೇಟಾಲೂರು ಕೆರೆಗೆ ಡ್ರೈ ಸಿಲ್ಟ್ - 4119 ಘನ ಮೀಟರ್ ತೆಗೆದಿದ್ದೇವೆ. ನೀವು ಯಾವುದನ್ನು ಕೇಳುತ್ತಿದ್ದೀರಿ?

ಅಧ್ಯಕ್ಷರು :- ನೀವು ಎಲ್ಲಾ ಗುರ್ತು ಹಾಕಿಕೊಳ್ಳಬೇಕು. ಇನ್ನೂ ಅರ್ಧ ಗಂಟೆ ಆಗುತ್ತದೆ.

ಶ್ರೀ ಡಿ.ಬಿ. ಚಂದ್ರೇಗೌಡ :- ಡ್ರೈ ಸಿಲ್ಟ್ ತೆಗೆಯುವುದು 7596.12 ಘನ ಮೀಟರ್ ತೆಗೆದಿದ್ದೇನೆ. ಸಿಲ್ಟ್ 11,408.19 ಘನ ಮೀಟರ್ ತೆಗೆದಿದ್ದೇವೆ. ಇದಕ್ಕೆ ಆಗಿರತಕ್ಕ ಖರ್ಚು ಕೊಟ್ಟಿದ್ದೇನೆ.

ಬೆಂಗಳೂರು ನಗರದಲ್ಲಿ ಪೇ ಅಂಡ್ ಪಾರ್ಕ್ ಯೋಜನೆ

109(1098) ಶ್ರೀ ಪಿ.ಸಿ. ಮೋಹನ್ (ಚಿಕ್ಕಪೇಟೆ) ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಂಗಳೂರು ನಗರದಲ್ಲಿ ಎಷ್ಟು ರಸ್ತೆಗಳನ್ನು ಪೇ ಅಂಡ್ ಪಾರ್ಕ್ ಯೋಜನೆಯಡಿಯಲ್ಲಿ ತರಲು ಉದ್ದೇಶಿಸಲಾಗಿದೆ? (ರಸ್ತೆಗಳ ವಿವರಗಳನ್ನು ಒದಗಿಸುವುದು);

ಆ) ಹೇ ಅಂಡ್ ಪಾರ್ಕ್ ಯೋಜನೆಯನ್ನು ಜಾರಿಗೆ ತರಲು ಅನುಸರಿಸುವ ಮಾನದಂಡಗಳೇನು?

ಇ) ಹೊಸ ರಸ್ತೆಗಳನ್ನು ಈ ಯೋಜನೆಯಡಿಯಲ್ಲಿ ಜಾರಿಗೆ ತರಲು ಉದ್ದೇಶಿಸಿದೆಯೇ?

ಈ) ವೇ ಲಿಂಡ್ ಪಾರ್ಕ್ ಯೋಜನೆಯಿಂದ ನಗರ ಪಾಲಿಕೆಗೆ ಬರುತ್ತಿರುವ ಆದಾಯ ಎಷ್ಟು? (ವಿವರ ಒದಗಿಸುವುದು);

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಯವರು)

ಅ) ಬೆಂಗಳೂರು ಮಹಾನಗರ ಪಾಲಿಕೆಯು ಬೆಂಗಳೂರು ನಗರದ ಸಂಚಾರಿ ಪೊಲೀಸ್‌ನವರನ್ನು ಸಮಾಲೋಚಿಸಿ 95 ರಸ್ತೆಗಳಲ್ಲಿ ಪಾವತಿ ಮತ್ತು ನಿಲುಗಡೆ ಯೋಜನೆಯನ್ನು ಜಾರಿಗೆ ತಂದಿರುತ್ತದೆ. (95 ರಸ್ತೆಗಳ ಪಟ್ಟಿಯನ್ನು ಅನುಬಂಧದಲ್ಲಿ ನೀಡಲಾಗಿದೆ).